# ಈಸ್ಟರ್ ಕತೆಗಳು

ಕೌಂಟ್ ಲಿಯೊ ಟಾಲ್‌ಸ್ಟಾಯ್ ಅವರ ಪ್ರತಿಭೆ ರಷ್ಯಾ ಸಂಸ್ಕೃತಿಯಲ್ಲಿ ಬೇರೂರಿ, ಅಂತಿಮವಾಗಿ ಅದು ಜಾಗತಿಕ ಮಟ್ಟದಲ್ಲಿ ಎಲ್ಲ ಮನುಷ್ಯರ ಬಗೆ ಬಗೆಯ ವರ್ತನೆಗಳನ್ನು ಅದರ ಆಳ ಅಗಲಗಳ ಸಮೇತ ತೆರೆದು ತೋರುವ ಕೊನೆ ಮೊದಲಿಲ್ಲದ ಆಕಾಶದಂತೆ. ಟಾಲ್‌ಸ್ಟಾಯ್ ಅಂತಿಮವಾಗಿ ಜಾತಿ–ಮತ–ಧರ್ಮ ಹಾಗೂ ದೇಶಗಳನ್ನು ಮೀರಿ ಮನುಕುಲದ ಹಿತವನ್ನೇ ನಿರಂತರವಾಗಿ ಧ್ಯಾನಿಸಿದ ಅಸಾಧಾರಣ ಶಕ್ತಿಯ ಲೇಖಕ. ಮನುಕುಲವನ್ನು ಬಾಧಿಸುತ್ತಿರುವ ದ್ವೇಷ, ಹಗೆತನ, ಹಿಂಸೆ ಪ್ರತೀಕಾರವನ್ನು ತಿರಸ್ಕರಿಸಿ, ಮನುಷ್ಯನ ಒಳಿತಿಗಾಗಿ ಬರೆದು ಅದೇ ರೀತಿಯಾಗಿ ಕೊನೆಯವರೆಗೂ ಬಾಳಿದ ಲೇಖಕ. ಟಾಲ್‌ಸ್ಟಾಯ್ ಕ್ರೈಸ್ತ ಧರ್ಮವನ್ನು ಗಂಭೀರವಾಗಿ ಅಭ್ಯಾಸ ಮಾಡಿದಾಗ ಅವರಿಗೆ ತಿಳಿದದ್ದು, ಚರ್ಚ್ ಎಂಬುದು ಒಂದು ಲೇವಾದೇವಿಯ ಕೇಂದ್ರ. ಈ ಪಾದ್ರಿಗಳು ಕ್ರಿಸ್ತನ ಸತ್ಯಪಥದಿಂದ ದೂರ ಉಳಿದಿರುವ ಆಳರಸರ ಜೀತದಾಳುಗಳು. ನಿಜವಾದ ಕ್ರೈಸ್ತ ಧರ್ಮವು ಚರ್ಚ್‌ಗಳಲ್ಲಿಲ್ಲ! ಅದು ಇರುವುದು ಮಾನವನ ಎದೆಯಲ್ಲಿ ಎಂಬುದನ್ನು ಮನಗಂಡ. 'ಕ್ರಿಸ್ತ ಪ್ರಯತ್ನಪಟ್ಟಿದ್ದು ದೇವರ ರಾಜ್ಯದ ಸ್ಥಾಪನೆಗೆ. ಟಾಲ್‌ಸ್ಟಾಯ್ ಪ್ರಯತ್ನಪಟ್ಟಿದ್ದು ನಿಜವಾದ ಮಾನವರ ರಾಜ್ಯ ಸ್ಥಾಪನೆಗೆ' (ಜಿಎಸ್‌ಎಸ್).

ಚಿತ್ರಗಳಿಗಾಗಿ ಟಾಲ್‌ಸ್ಟಾಯ್ ಬರೆದ ಒಂದು ಕತೆ ನಮ್ಮ ಸಮಕಾಲೀನ ಜಗತ್ತಿನ ಬಗ್ಗೆ ಭಾಷ್ಯದಂತಿದೆ. ಆ ಕತೆ ಹೀಗಿದೆ: ಹಿಂದೆ ಮಾಲೀಕರ ಬಳಿ ಅನೇಕ ಗುಲಾಮರು ಕೆಲಸ ಮಾಡುತ್ತಿದ್ದರು. ತಮ್ಮ ಧಣಿ ಒಳ್ಳೆಯವನೆಂದು, ತಮಗೆ ಕಿರುಕುಳವನ್ನು ಕೊಡದವನೆಂದೂ, ನಮ್ಮೊಂದಿಗೆ ಒಳ್ಳೆಯ ಮಾತನಾಡುತ್ತಾ ಚೆನ್ನಾಗಿ ನೋಡಿಕೊಳ್ಳುತ್ತಾನೆಂದೂ ಅವರು ಸಮಯ ಸಿಕ್ಕಾಗಲೆಲ್ಲ ಮಾಲೀಕನನ್ನು ಗುಣಗಾನ ಮಾಡುತ್ತಿದ್ದರು. ಇವನಿಗಿಂಥ ಮಿಗಿಲಾದ ಮಾಲೀಕ ನಮಗೆ ದೊರೆಯಲಾರ ಎಂದು ಎಲ್ಲರೊಡನೆ ಹೇಳುತ್ತಿದ್ದರು. ಇವರ ಮಾತುಗಳನ್ನೆಲ್ಲಾ ಒಂದು ಪಿಶಾಚಿ ಕೇಳಿಸಿಕೊಳ್ಳುತ್ತಿತ್ತು. ಈ ಗುಲಾಮರೆಲ್ಲ ತಮ್ಮ ಧಣಿಯ ಬಗ್ಗೆ ಈ ಬಗೆಯ ನಂಬಿಕೆಯಿಟ್ಟಿರುವುದನ್ನು ನೋಡಿ ಅದಕ್ಕೆ ಅಸೂಯೆಯಾಯಿತು. ಏನಾದರೂ ಮಾಡಿ ಈ ಧಣಿಯ ಬಗ್ಗೆ ಗುಲಾಮರು ಇಟ್ಟಿರುವ ನಂಬಿಕೆಯನ್ನು ಬದಲು ಮಾಡಬೇಕು ಎಂದು ಯೋಚಿಸಿತು. ಆ ಗುಲಾಮರ ನಡುವೆ ಇದ್ದ ಆಲೆಬ್ ಎನ್ನುವವನನ್ನು ಕರೆದು ಅವನಿಗೆ ಧಣಿಯ ಬಗ್ಗೆ ಗುಲಾಮನಿಗಿರುವ ನಂಬಿಕೆಯನ್ನು ಹೇಗಾದರೂ ಮಾಡಿ ತೊಡೆದುಹಾಕಬೇಕೆಂದು ಹೇಳಿತು.

ಪಿಶಾಚಿ ಹೇಳಿದ ಮಾತನ್ನು ಕೇಳಿದ ಆಲೆಬ್ ತನ್ನ ಗೆಳೆಯರ ನಡುವೆ ಹೋಗಿ, ಧಣಿ ಹೇಳಿದ್ದನ್ನೆಲ್ಲಾ ನೀವು ಮಾಡುತ್ತಿದ್ದರೆ, ಪಿಶಾಚಿಗಳೂ ಕೂಡ ನಮಗೆ ದಯೆವುಳ್ಳವರಂತೆ ಕಾಣುತ್ತವೆ. ಆದ್ದರಿಂದ ನೀವೆಲ್ಲ ಮೂರ್ಖತನದಿಂದ ಮಾತನಾಡುತ್ತಿದ್ದೀರಿ. ನಿಮಗೆ ತಿಳಿದಂತೆ ನಾವೆಲ್ಲ ಧಣಿ ಹೇಳಿದ್ದನ್ನು ಮಾಡುತ್ತಾ ಅವನಿಗೆ ಹಿತವಾಗಿರುವಂತೆ ವರ್ತಿಸುತ್ತಿದ್ದೇವೆ. ನಾವು ಮಾಡುವ ಕೆಲಸವನ್ನೆಲ್ಲ ನೋಡಿ ಅವನು ನಮ್ಮ ಮೇಲೆ ದಯೆ ತೋರುತ್ತಿದ್ದರೆ ಅದರಲ್ಲಿ ಅಂತಹ ವಿಶೇಷವೇನಿಲ್ಲ! ಇದಕ್ಕೆ ಪ್ರತಿಯಾಗಿ ನಾವು ಏನಾದರೂ ಅವನ ನಂಬಿಕೆಗೆ ಕೇಡು ಬಗೆದರೆ ಆಗ ಪರಿಸ್ಥಿತಿ ಏನಾಗುತ್ತದೆ ಎಂದು ಪರೀಕ್ಷಿಸಿ ನೋಡಿ. ಅವನು ನಮ್ಮನ್ನು ಹಿಂಸಿಸುತ್ತಾನೆ, ನಮ್ಮನ್ನು ಕೆಲಸದಿಂದ ಹೊರಹಾಕುತ್ತಾನೆ! ಎಲ್ಲ ಧಣಿಗಳು ಯಾವಾಗಲೂ ಕೆಟ್ಟದ್ದಕ್ಕೆ ಕೆಟ್ಟದ್ದನ್ನೇ ಮಾಡುತ್ತಾರೆ. ಎಂದು ಗೆಳೆಯರ ಮನಸ್ಸು ಕೆಡುವಂತೆ ಪ್ರಚೋದಿಸಿದ. ಕಡೆಗೆ ನಾಳೆ ಬೆಳಗ್ಗೆ ನಾನೆ ಮಾಲೀಕನನ್ನು ಸಿಟ್ಟಿಗೆಬ್ಬಿಸುವುದಾಗಿ ಉಳಿದವರಲ್ಲಿ ಪಂಥ ಕಟ್ಟಿಕೊಂಡ. ಆಲೆಬ್ ಮಾಲೀಕನ ಬಳಿ ಕುರಿ ಕಾಯುತ್ತಿದ್ದ. ಮಾಲೀಕ ತನ್ನ ಬಳಿ ಅತ್ಯಂತ ಬೆಲೆಬಾಳುವ ಶ್ರೇಷ್ಠ ತಳಿಯ ಕುರಿಯಿದೆಯೆಂದು ತನ್ನ ಗೆಳೆಯರಿಗೆ ಹೇಳಿದ. ಬೆಲೆಬಾಳುವ ಕುರಿಯನ್ನು ತೋರಿಸಲು ಅವರನ್ನು ತನ್ನ ರೊಪ್ಪಕ್ಕೆ ಕರೆತಂದ. ಆಲೆಬ್ ತನ್ನ ಗುಲಾಮ ಸ್ನೇಹಿತರ ಕಡೆ ನೋಡಿ, ಈಗ ಮಾಲೀಕನನ್ನು ಹೇಗೆ ಸಿಟ್ಟಿಗೇಳುವಂತೆ ಮಾಡುತ್ತೇನೆ ನೋಡಿ ಎಂದು ಕಣ್ಣುಮಿಟುಕಿಸಿ ಬಂದವರಿಗೆ ಗೊತ್ತಾಗದಂತೆ ಹೇಳಿದ.

ಆಗುಂತಕರು ರೊಪ್ಪಕ್ಕೆ ಬಂದಿದ್ದನ್ನು ನೋಡಿ ಕುರಿಗಳೆಲ್ಲ ಗಾಬರಿಯಾಗಿ ಓಡಾಡತೊಡಗಿದವು. ಆಗ ಆಲೆಬ್ ಕುರಿಗಳ ನಡುವೆ ಪೊಗದಸ್ತಾಗಿ ಕಾಣುತ್ತಿದ್ದ ಟಗರೊಂದನ್ನು ಹಿಡಿದು ಅದರ ಒಂದು ಹಿಂಗಾಲನ್ನು ತಿರುಚಿದ. ಕಾಲು ಮುರಿದುಕೊಂಡ ಟಗರು ನೋವಿನಿಂದ ಅರಚಿ ನೆಲದ ಮೇಲೆ ಬಿದ್ದಿತು. ಅದೇ ರೀತಿ ಆಲೆಬ್ ಟಗರಿನ ಮುಂಗಾಲನ್ನೂ ಹೀಗೆಯೇ ತಿರುಚಿ ಎಸೆದ. ಇದನ್ನು ನೋಡುತ್ತಿದ್ದ ಗುಲಾಮರು 'ಅಯ್ಯೋ' ಎಂದು ಮರುಗಿದರು. ಇದೆಲ್ಲವನ್ನೂ ನೋಡುತ್ತಿದ್ದ ಪಿಶಾಚಿಯು, ಆಲೆಬ್ ತಾನು ಹೇಳಿದಂತೆಯೇ ಮಾಡುತ್ತಿದ್ದಾನೆ ಎಂದು ಸಂತೋಷಪಡುತ್ತಿತ್ತು. ಆಲೆಬ್‌ನಿಂದಾಗಿ ತನ್ನ ಟಗರಿಗೆ ಆದ ಗತಿಯನ್ನು ನೋಡಿದ ಮಾಲೀಕನ ಮುಖ ಸಿಟ್ಟಿನಿಂದ ಕಪ್ಪಿಟ್ಟಿತು. ಆದರೂ ಅವನು ಒಂದೂ ಮಾತನಾಡದೆ ಸೌಮ್ಯವಾಗಿದ್ದ. ಬಂದಿದ್ದ ಆಗುಂತಕರು ಭಯದಿಂದ ಮುಂದೇನಾಗುವುದೊ ಎಂದು ಹೆದರಿ ನಿಂತರು.

ಸ್ವಲ್ಪ ಹೊತ್ತಿನ ನಂತರ ಚೇತರಿಸಿಕೊಂಡ ಮಾಲೀಕನ ಮುಖ ಮತ್ತೆ ಹಸನ್ಮುಖಿಯಾಯಿತು. ಅವನು ನಗುತ್ತಾ ಆಲೆಬ್‌ನ ಕಡೆ ನೋಡಿ 'ಆಲೆಬ್, ನನ್ನನ್ನು ಕೋಪಗೊಳಿಸುವಂತೆ ನಿನ್ನ ಧಣಿಯಾದ ಪಿಶಾಚಿ ನಿನಗೆ ತಿಳಿಸಿತ್ತು. ನೀನು ಅದರಂತೆ ಮಾಡಿದೆ. ಆದರೆ ನನ್ನೊಳಗಿರುವ ಧಣಿ ನಿನ್ನ ಮೇಲೆ ಕೋಪಗೊಳ್ಳಬೇಡವೆಂದು ಹೇಳಿದ್ದಾನೆ. ನಾನು ನಿನಗೆ ಶಿಕ್ಷೆ ಕೊಡುತ್ತೇನೆಂದು ಹೆದರಿದ್ದೀಯಾ. ಅಲ್ಲದೆ ಎಲ್ಲರಿಗೂ ಸ್ವಾತಂತ್ರ್ಯಬೇಕೆಂದು ಆಸೆಪಟ್ಟಿದ್ದೀಯೆ. ಅದರಂತೆ ನಾನು ನಿನಗೆ ಯಾವ ಶಿಕ್ಷೆಯನ್ನು ಕೊಡುವುದಿಲ್ಲ. ನೀನು ಬಯಸಿದಂತೆ ನಿನ್ನನ್ನೂ ಸೇರಿಸಿ ಇಲ್ಲಿರುವ ಎಲ್ಲ ಗುಲಾಮರನ್ನು ಬಂಧಮುಕ್ತರನ್ನಾಗಿಸುತ್ತೇನೆ. ನಿನ್ನ ಇಷ್ಟ ಬಂದ ಕಡೆಗೆ ಹೋಗಿ. ಎಂದು ಮಾಲೀಕ ಹೇಳಿದ. ಇದೆಲ್ಲವನ್ನೂ ನೋಡುತ್ತಿದ್ದ ಪಿಶಾಚಿಯು ತಾನು ಬಯಸಿದ್ದೇ ಒಂದು; ಆದರೆ ಈಗ ನಡೆದದ್ದೇ ಒಂದು ಎಂದು ಭಾವಿಸಿ ಅಲ್ಲಿಂದ ಮಾಯವಾಯಿತು.

ಟಾಲ್‌ಸ್ಟಾಯ್ 'ಮನುಷ್ಯ ಮನುಷ್ಯನಾಗಿ ಬಾಳುವುದಕ್ಕೆ ಪ್ರೇಮವೊಂದೇ ಕಾರಣವು. ಯಾರಿಗೆ ಪ್ರೇಮವಿದೆಯೋ ಅವನು ದೇವರಲ್ಲಿದ್ದಾನೆ; ಏಕೆಂದರೆ ದೇವರೆಂದರೆ ಪ್ರೇಮ ಸ್ವರೂಪಿ' ಎಂದು ಭಾವಿಸಿ ತಮ್ಮ ಕೃತಿಗಳಲ್ಲೂ ಇದೇ ಮಾನವತೆಯ ದರ್ಶನವನ್ನು ಮನಗಾಣಿಸಿದರು. ಇದೇ ಭ್ರಾತೃತ್ವ ಮತ್ತು ವಿಶ್ವಶಾಂತಿ. ಇದನ್ನೇ ಕುವೆಂಪು 'ವಿಶ್ವಮಾನವ ತತ್ವ' ಎಂದು ಕರೆದರು.

■ **ಜಿ.ವಿ. ಆನಂದಮೂರ್ತಿ**

## ಮಾತೇ ಮುತ್ತು

- ಉತ್ಸಾಹದಿಂದ ಕೆಲಸ ಮಾಡುವವನು ತನ್ನ ಗುರಿ ಮುಟ್ಟುವಲ್ಲಿ ಯಶಸ್ವಿಯಾಗುತ್ತಾನೆ.
  —ಬಿ.ಎಂ. ಶ್ರೀಕಂಠಯ್ಯ
- ನಾನು ಒಳ್ಳೆಯ ರೀತಿಯಲ್ಲಿ ಹೇಗೆ ಬದುಕಬೇಕೆಂಬುದನ್ನು ಪುಸ್ತಕಗಳು ಹೇಳಿ ಕೊಡುತ್ತವೆ.
  —ಜಾರ್ಜ್ ಬರ್ನಾರ್ಡ್ ಶಾ
- ಮಣ ಮಾತಿಗಿಂತ, ತೊಲ ಕೆಲಸ ಲೇಸು.
  —ಡಿ.ವಿ. ಗುಂಡಪ್ಪ
- ಶನಿಶಕ್ತಿ ಕಿನ್ನರ ಶಕ್ತಿಗಳೆರಡೂ ಮಾನವನಲ್ಲಿವೆ. ಶನಿಶಕ್ತಿಯನ್ನು ದಮನಮಾಡಿ ಕಿನ್ನರ ಶಕ್ತಿಯನ್ನು ಎಚ್ಚರಿಸಿದಾಗ ಮಾತ್ರ ಮಾನವನ ಉನ್ನತಿ ಸಾಧ್ಯ.
  —ಕುವೆಂಪು
- ದೊಡ್ಡ ಯೋಚನೆಗಳನ್ನು ಹೊಂದಿರುವವರು ಎಂದೂ ಏಕಾಂಗಿಗಳಲ್ಲ.
  —ಎಸ್. ರಾಧಾಕೃಷ್ಣನ್
- ಧರ್ಮ ಎಂದರೆ ಬೇರೇನೂ ಅಲ್ಲ. ಅದು ಅಖಂಡ ಪ್ರೀತಿ.
  —ಏಸು
- ವೈದ್ಯನೊಡನೆ ಗುರುವಿನೊಡನೆ ಗುಟ್ಟು ಮಾಡಿದರೆ ಕ್ಷೇಮಕರ ಅಲ್ಲ.
  —ಕುವೆಂಪು
- ಯಾರು ಸ್ವದೇಶವನ್ನು ಪ್ರೀತಿಸಲಾರನೋ ಅವನು ಏನನ್ನೂ ಪ್ರೀತಿಸಲಾರ.
  —ತಾತ್ಯಾಟೋಪಿ